ಕರ್ನಾಟಕ ಸರ್ಕಾರ
ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ
ವಾರ್ತಾ ಸೌಧ, ಸಂಖ್ಯೆ 17, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001.

ಸಂಖ್ಯೆ : ವಾಇ : ಉ ನಿ : ಸುಮಪ : 2017-18 ದಿನಾಂಕ: 20-5-2017

# ಪತ್ರಿಕಾ ಆಮಂತ್ರಣ

1. ಮಹಿಳಾ ಉದ್ಯಮಿಗಳೊಡನೆ ರಾಜ್ಯ ಮಟ್ಟದ ಸಂವಾದ ಕಾರ್ಯಕ್ರಮ – 2017 : "ಬದಲಾವಣೆಗಾಗಿ ಧೈರ್ಯವುಳ್ಳವರಾಗಿ"

ಉದ್ಘಾಟನೆ:

ಶ್ರೀಮತಿ ಉಮಾಶ್ರೀ,
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಮತ್ತು ಕನ್ನಡ ಮತ್ತು ಸಂಸ್ಕೃತಿ ಸಚಿವರು.
ಅಧ್ಯಕ್ಷತೆ:

ಪ್ರಿಯಕೃಷ್ಣ,
ಶಾಸಕರು, ಗೋವಿಂದನಗರ ವಿಧಾನಸಭಾಕ್ಷೇತ್ರ,
ಬೆಂಗಳೂರು.

ಮುಖ್ಯ ಅತಿಥಿಗಳು:

ಅನಂತಕುಮಾರ್, ಕೇಂದ್ರದ ರಾಸಾಯನಿಕ ಮತ್ತು ರಸಗೊಬ್ಬರ ಹಾಗೂ ಸಂಸದೀಯ ವ್ಯವಹಾರಗಳ ಸಚಿವರು.

ಕೆ.ಜೆ.ಜಾರ್ಜ್, ಬೆಂಗಳೂರು ಅಭಿವೃದ್ಧಿ ಮತ್ತು ನಗರ ಯೋಜನಾ ಸಚಿವರು ಹಾಗೂ ಬೆಂಗಳೂರು ನಗರ ಜಿಲ್ಲೆ ಉಸ್ತುವಾರಿ ಸಚಿವರು.

ಶ್ರೀಮತಿ ಜಿ. ಪದ್ಮಾವತಿ, ಮಹಾಪೌರರು, ಬೃಹತ್ ಬೆಂಗಳೂರು ಮಹಾನಗರಪಾಲಿಕೆ.

ಪರಿಷ್ಕೃತ ಬಡ್ಡಿ ಸಹಾಯಧನ ಯೋಜನೆಗೆ ಚಾಲನೆ:

ಎನ್.ಎ. ಹ್ಯಾರಿಸ್, ಶಾಂತಿನಗರ ವಿಧಾನಸಭಾ ಕ್ಷೇತ್ರ ಹಾಗೂ ಅಧ್ಯಕ್ಷರು, ಕರ್ನಾಟಕ ವಿಧಾನ ಮಂಡಲದ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಮಿತಿ.

**ದಿನಾಂಕ: 22-05-2017, ಸೋಮವಾರ ಸಮಯ: ಬೆಳಿಗ್ಗೆ : 11-00 ಗಂಟೆಗೆ.**

**ಸ್ಥಳ: ಕಾಸಿಯಾ ಸಭಾಂಗಣ, 2/106, 17ನೇ ಕ್ರಾಸ್, ಮಾಗಡಿ ಕಾರ್ಡ್ ರಸ್ತೆ, ವಿಜಯನಗರ ಟೋಲ್‌ಗೇಟ್ ಹತ್ತಿರ, ವಿಜಯನಗರ, ಬೆಂಗಳೂರು – 560 040**

**2. ಕರ್ನಾಟಕ ರಾಜ್ಯ ಮಾವು ಅಭಿವೃದ್ಧಿ ಮತ್ತು ಮಾರುಕಟ್ಟೆ ನಿಗಮ(ನಿ) ದಿಂದ ಮಾವು ಮಾರಾಟ ಮೇಳ:**

**ಉದ್ಘಾಟನೆ:**

ಶ್ರೀಮತಿ ಪದ್ಮಾವತಿ, ಪೂಜ್ಯ ಮಹಾಪೌರರು, ಬಿ.ಬಿ.ಎಂ.ಪಿ.

**ಉಪಸ್ಥಿತಿ:**

ಗೋಪಾಲಕೃಷ್ಣ, ಅಧ್ಯಕ್ಷರು, ಕರ್ನಾಟಕ ರಾಜ್ಯ ಮಾವು ಅಭಿವೃದ್ಧಿ ಮತ್ತು ಮಾರುಕಟ್ಟೆ ನಿಗಮ(ನಿ)

**ದಿನಾಂಕ: 22-5-2017 ಸೋಮವಾರ ಸಂಜೆ 4-30 ಗಂಟೆಗೆ**

**ಸ್ಥಳ: ಬಯಪ್ಪನಹಳ್ಳಿ ಮೆಟ್ರೋ ನಿಲ್ದಾಣ, ಬೆಂಗಳೂರು**

## ಪತ್ರಿಕಾ ಪ್ರಕಟಣೆ

# ಪತ್ರಕರ್ತರ ಮಾಸಾಶನ ಸಮಿತಿ ರಚನೆ

ಬೆಂಗಳೂರು, ಮೇ 20, (ಕರ್ನಾಟಕ ವಾರ್ತೆ)

ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ವತಿಯಿಂದ ಸಂಕಷ್ಟದಲ್ಲಿರುವ ಪತ್ರಕರ್ತರಿಗೆ ಮಾಸಾಶನ ನೀಡಲು ಪತ್ರಕರ್ತರ ಮಾಸಾಶನ ಸಮಿತಿಯನ್ನು ರಚಿಸಿ ರಾಜ್ಯ ಸರ್ಕಾರ ಆದೇಶ ಹೊರಡಿಸಿದೆ.

ಈ ಸಮಿತಿಯು ಕಾಲಕಾಲಕ್ಕೆ ಸಭೆ ಸೇರಿ ಅರ್ಹ ಫಲಾನುಭವಿಗಳನ್ನು ಆಯ್ಕೆ ಮಾಡಲಿದೆ.

ಈ ಸಮಿತಿಯಲ್ಲಿ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಮುಖ್ಯಸ್ಥರು ಅಧ್ಯಕ್ಷರಾಗಿದ್ದು, ಸದಸ್ಯರಾಗಿ ಹಿರಿಯ ಪತ್ರಕರ್ತರ ಸಿದ್ಧಿಕಿ ಅಲ್ದೂರಿ, ನಿವೃತ್ತ ಪತ್ರಕರ್ತರಾದ ಶ್ರೀಮತಿ ಶಾಂತಮ್ಮ, ಹೆಚ್.ಆರ್. ಶ್ರೀಶ, ಮನೋಹರ ಯಡವಟ್ಟಿ ಹಾಗೂ ಜನತಾ ಮಾಧ್ಯಮ ಪತ್ರಿಕೆಯ ಸಂಪಾದಕ ವೆಂಕಟೇಶ್‌ಮೂರ್ತಿ ಅವರು ಸೇರಿದಂತೆ  ಸುದ್ದಿ ಮತ್ತು ಪತ್ರಿಕಾ ಶಾಖೆಯ ಉಪ ನಿರ್ದೇಶಕರು ಸದಸ್ಯ ಕಾರ್ಯದರ್ಶಿಯಾಗಿ ಕಾರ್ಯನಿರ್ವಹಿಸಲಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

ಜೆಡಿ::ಜಿಪಿಆರ್

# “ಭಯೋತ್ಪಾದನಾ ವಿರೋಧಿ ದಿನ” ಆಚರಣೆ

**ಬೆಂಗಳೂರು, ಮೇ 20, (ಕರ್ನಾಟಕ ವಾರ್ತೆ)**

ಪ್ರತಿವರ್ಷ ಮೇ 21 ಅನ್ನು “ಭಯೋತ್ಪಾದನಾ ವಿರೋಧಿ ದಿನ” ಎಂದು ಆಚರಿಸಲಾಗುತ್ತಿದ್ದು, ಪ್ರಸಕ್ತ ವರ್ಷ ಭಾನುವಾರ ಮೇ 21 ಬಂದಿರುವುದರಿಂದ  ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಕೇಂದ್ರ ಕಚೇರಿಯಲ್ಲಿ ಇಂದು ಬೆಳಿಗ್ಗೆ 11.00 ಗಂಟೆ “ಭಯೋತ್ಪಾದನಾ ವಿರೋಧಿ ದಿನ” ವನ್ನು ಆಚರಿಸಲಾಯಿತು.

“ಅಹಿಂಸೆ ಹಾಗೂ ಸಹನೆಗೆ ಹೆಸರಾದ ನಮ್ಮ ರಾಷ್ಟ್ರದ ಭವ್ಯ ಪರಂಪರೆಯಲ್ಲಿ ದೃಢ ವಿಶ್ವಾಸವುಳ್ಳ ಭಾರತದ ಪ್ರಜೆಗಳಾದ ನಾವು ಎಲ್ಲಾ ಬಗೆಯ ಭಯೋತ್ಪಾದನೆ ಮತ್ತು ಹಿಂಸೆಯನ್ನು ನಮ್ಮೆಲ್ಲ ಶಕ್ತಿ ಸಾಮರ್ಥ್ಯದಿಂದ ಎದುರಿಸುತ್ತೇವೆ ಎಂದು ಈ ಮೂಲಕ ಶ್ರದ್ಧಾಪೂರ್ವಕವಾಗಿ ಪ್ರತಿಜ್ಞೆ ಮಾಡುತ್ತೇವೆ.  ನಮ್ಮ ಸಹಬಾಂಧವರಲ್ಲಿ ಶಾಂತಿ, ಸಾಮಾಜಿಕ ಸೌಹಾರ್ದತೆ ಮತ್ತು ಪರಸ್ಪರ ಅರಿವನ್ನು ಸಾಧಿಸಲು ಹಾಗೂ ಉತ್ತೇಜಿಸಲು ಮತ್ತು ಮಾನವ ಜೀವಕ್ಕೆ ಹಾಗೂ ಮೌಲ್ಯಗಳಿಗೆ ಬೆದರಿಕೆ ಒಡ್ಡುತ್ತಿರುವ ವಿಚ್ಛಿದ್ರಕಾರಿ ಶಕ್ತಿಗಳ ವಿರುದ್ಧ ಹೋರಾಡಲು ನಾವು ಪಣ ತೊಡುತ್ತೇವೆ” ಎಂದು ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಉಪ ನಿರ್ದೇಶಕರಾದ  ಎ.ಆರ್. ಪ್ರಕಾಶ್  ಅವರು ಪ್ರತಿಜ್ಞಾವಚನವನ್ನು ಬೋಧಿಸಿದರು.

ಈ ಸಂದರ್ಭದಲ್ಲಿ  ಇಲಾಖೆಯ  ಅಧಿಕಾರಿ ಹಾಗೂ ಸಿಬ್ಬಂದಿ ವರ್ಗದವರು ಹಾಜರಿದ್ದರು.

ಜೆಡಿ::ಜಿಪಿಆರ್

## ಮೇ 23 ರಂದು ಡಾ. ಬಿ.ಆರ್. ಅಂಬೇಡ್ಕರ್ ಅವರ ಕುರಿತು ರಾಜ್ಯ ಮಟ್ಟದ ವಿಚಾರ ಸಂಕಿರಣ – ಹೆಚ್. ಆಂಜನೇಯ

ಬೆಂಗಳೂರು, ಮೇ 20, (ಕರ್ನಾಟಕ ವಾರ್ತೆ)

ಸಾಮಾಜಿಕ ನ್ಯಾಯ ಮತ್ತು ಡಾ. ಬಿ.ಆರ್. ಅಂಬೇಡ್ಕರ್ ಕುರಿತ ರಾಜ್ಯ ಮಟ್ಟದ ವಿಚಾರ ಸಂಕಿರಣವನ್ನು ಮೇ 23 ರಂದು ಬೆಂಗಳೂರಿನ ಡಾ.ಅಂಬೇಡ್ಕರ್ ಭವನದಲ್ಲಿ ಆಯೋಜಿಸಲಾಗಿದ್ದು, ನೋಬಲ್ ಶಾಂತಿ ಪುರಸ್ಕೃತ ಧರ್ಮಗುರು ದಲೈಲಾಮ ಅವರು ಪ್ರಧಾನ ಭಾಷಣ ಮಾಡಲಿದ್ದಾರೆ ಎಂದು ಸಮಾಜ ಕಲ್ಯಾಣ ಸಚಿವ ಹೆಚ್. ಆಂಜನೇಯ ಅವರು ತಿಳಿಸಿದರು.

ವಿಧಾನಸೌಧದ ಸಮ್ಮೇಳನ ಸಭಾಂಗಣದಲ್ಲಿ ಇಂದು ಸುದ್ದಿಗೋಷ್ಠಿಯಲ್ಲಿ ಈ ವಿಷಯ ತಿಳಿಸಿದ ಅವರು ಈ ವಿಚಾರ ಸಂಕಿರಣವನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಉದ್ಘಾಟಿಸಲಿದ್ದಾರೆ. ಅದೇ ರೀತಿ ದೇಶದಲ್ಲೇ ಮೊದಲ ಬಾರಿಗೆ ಅಂತರರಾಷ್ಟ್ರೀಯ ಮಟ್ಟದ ವಿಚಾರ ಸಂಕಿರಣವನ್ನು ಜುಲೈ 21 ರಿಂದ 23 ರವರೆಗೆ ಬೆಂಗಳೂರಿನಲ್ಲಿ ಆಯೋಜಿಸಲು ತೀರ್ಮಾನಿಸಲಾಗಿದೆ ಎಂದ ಸಚಿವರು ಈ ವಿಚಾರ ಸಂಕಿರಣಕ್ಕೆ 58 ದೇಶಗಳ ಪ್ರತಿನಿಧಿಗಳು ಭಾಗವಹಿಸಲು ಸಮ್ಮತಿ ನೀಡಲಾಗಿದೆ ಎಂದರು.

ದೇಶಕ್ಕೆ ಅಂಬೇಡ್ಕರ್ ಅವರು ನೀಡಿರುವ ಕೊಡುಗೆಯನ್ನು ಅರ್ಥಪೂರ್ಣವಾಗಿ ಆಯೋಜಿಸಲು ರಾಜ್ಯ ಸರ್ಕಾರ ತೀರ್ಮಾನ ಕೈಗೊಂಡಿದೆ ಎಂದು ಸಚಿವ ಹೆಚ್. ಆಂಜನೇಯ್ಯ ಅವರು ತಿಳಿಸಿದರು.

ಸಮಾಜ ಕಲ್ಯಾಣ ಹಾಗೂ ಹಿಂದುಳಿದ ವರ್ಗಗಳ ಇಲಾಖೆಗಳ ವ್ಯಾಪ್ತಿಯಲ್ಲಿ ಖಾಲಿ ಇರುವ 23,308 ಖಾಲಿ ಹುದ್ದೆಗಳನ್ನು ಭರ್ತಿಮಾಡಲು ಸರ್ಕಾರ ನಿರ್ಧರಿಸಿದೆ. ಈ ಸಂಬಂಧ ರಾಜ್ಯ ಲೋಕಸೇವಾ ಆಯೋಗಕ್ಕೆ ಹುದ್ದೆಗಳನ್ನು ಭರ್ತಿಮಾಡುವಂತೆ ಪ್ರಸ್ತಾವನೆ ಕಳುಹಿಸಲಾಗಿದೆ ಎಂದರು.

ಹೊಸದಾಗಿ ಆರಂಭಿಸಲಿರುವ 770 ವಸತಿ ಶಾಲೆಗಳಿಗೆ ಅಡಿಗೆಯವರು ಸೇರಿದಂತೆ ವಿವಿಧ ಡಿ ದರ್ಜೆಯ ನೌಕರರನ್ನು ಆಯಾ ಜಿಲ್ಲಾಧಿಕಾರಿಗಳ ಮೂಲಕ ಪಾರದರ್ಶಕ ಹಾಗೂ ಮೆರಿಟ್ ಆಧಾರದಲ್ಲಿ ಭರ್ತಿಮಾಡಲು ಸೂಚನೆ ನೀಡಲಾಗಿದೆ. ಈ ವರ್ಷ ಆರಂಭವಾಗಲಿರುವ ವಸತಿ ಶಾಲೆಗಳ ನೇಮಕಾತಿಯು ಸೇರಿದಂತೆ 13,205 ಹುದ್ದೆಗಳ ನೇಮಕಾತಿಗೆ ಪ್ರಕ್ರಿಯೇ ಪ್ರಾರಂಭವಾಗಿದ್ದು. ಈ ನೇಮಕಾತಿಯಿಂದಾಗಿ ಈಗಾಗಲೇ ಹೊರಗುತ್ತಿಗೆಯಿಂದ ಕಾರ್ಯನಿರ್ವಹಿಸುತ್ತಿರುವ ಯಾವುದೇ ಸಿಬ್ಬಂದಿಗಳಿಗೂ ತೊಂದರೆಯಾಗುವುದಿಲ್ಲ ಎಂದು ಸಚಿವರು ಸ್ಪಷ್ಟಪಡಿಸಿದರು.

ಕೆಪಿಪಿ::ಜಿಪಿಆರ್

## ಪ್ರದೇಶಕ್ಕೆ ತಕ್ಕ ಬೆಳೆ ಆಯ್ಕೆಯಿಂದ ಉತ್ತಮ ಫಸಲು – ಕಮ್ಮರಡಿ

ಬೆಂಗಳೂರು, ಮೇ 20, (ಕರ್ನಾಟಕ ವಾರ್ತೆ)

ಯಾವ ಪ್ರದೇಶದಲ್ಲಿ ಯಾವ ಬೆಳೆಯನ್ನು ಬೆಳೆಯುವುದು ಸೂಕ್ತ ಎಂಬುದನ್ನು ರೈತರಿಗೆ ಮನವರಿಕೆ ಮಾಡುವ ನಿಟ್ಟಿನಲ್ಲಿ ವೈಜ್ಞಾನಿಕ ಸಂಶೋಧನೆ ಮಾಡಿ ಫಲಿತಾಂಶ ಕಂಡುಕೊಳ್ಳಬೇಕೆಂದು ರಾಜ್ಯ ಕೃಷಿ ಬೆಲೆ ಆಯೋಗದ ಅಧ್ಯಕ್ಷ ಡಾ. ಬಿ.ಎನ್. ಕಮ್ಮರಡಿ ಅವರು ತಿಳಿಸಿದರು.

ಅವರು ಇಂದು ಹೆಬ್ಬಾಳದ ರಾಷ್ಟ್ರೀಯ ಮಣ್ಣು ಸರ್ವೇಕ್ಷಣಾ ಮತ್ತು ಭೂಬಳಕೆ ನಿಯೋಜನಾ ಸಂಸ್ಥೆಯ ವಲಯ ಕೇಂದ್ರದಲ್ಲಿ ರಾಜ್ಯ ಆಹಾರ ಭದ್ರತೆ ಮತ್ತು ಮಣ್ಣು, ಪರಿಸರ, ಹವಾಮಾನಗಳಿಗೆ ಹೊಂದುಕೊಳ್ಳುವ ವಿವಿಧ ಬೆಳೆಗಳ ನಕ್ಷೆ ರಚಿಸುವ ಅಧ್ಯಯನದ ಅಂತಿಮ ಕಾರ್ಯಾಗಾರದಲ್ಲಿ ಭಾಗವಹಿಸಿ ಮಾತನಾಡಿದರು.

ಉತ್ತಮ ಬೆಳೆಗೆ ಮಣ್ಣಿನ ಆರೋಗ್ಯ ಬಹಳ ಮುಖ್ಯ, ಮಣ್ಣಿನಲ್ಲಿ ಬೋರನ್ ಅಂಶದ ಕೊರತೆಯಿಂದ ಮರಗಳಲ್ಲಿ ಹೂ ಕಾಯಿಯಾಗಿ ಪರಿವರ್ತನೆಗೊಳ್ಳುವುದಿಲ್ಲ. ಕಳೆದ 10 ವರ್ಷಗಳಲ್ಲಿ ರಾಜ್ಯದಲ್ಲಿನ ಬೆಳೆ ಪದ್ಧತಿ ಬಹಳಷ್ಟು ಬದಲಾವಣೆಹೊಂದಿದೆ. ನಮ್ಮಲ್ಲಿ ಹೆಚ್ಚಾಗಿ ಕಬ್ಬು, ಹತ್ತಿ, ಮೆಕ್ಕೆಜೋಳ ಹಾಗೂ ಅಡಿಕೆಯನ್ನು ಬೆಳೆಯಲಾಗುತ್ತದೆ. ತರಕಾರಿಗಳಲ್ಲಿ ಟೊಮೋಟೋ ಹಾಗೂ ಈರುಳ್ಳಿಗೆ ಪ್ರಾಧ್ಯಾನತೆ ಇದೆ, ಉಳಿದಂತೆ ರಾಗಿ, ಭತ್ತ ಮುಂತಾದ ಬೆಳೆಗಳನ್ನು ಬೆಳೆಯಲಾಗುತ್ತಿದೆ ಎಂದರು.

ನಾವು ಆಯಾ ಪ್ರದೇಶ, ವಾತಾವರಣೆ, ಮಣ್ಣಿನಗುಣ, ಬೇಡಿಕೆಗೆ ತಕ್ಕಂತೆ ಬೆಳೆಯನ್ನು ಆಯ್ಕೆಮಾಡಿ ಬೆಳೆಯುವುದು ಬಹಳ ಸೂಕ್ತವಾಗಿದೆ. ಉದಾ: ಕೋಲಾರದಲ್ಲಿ ಟೊಮೋಟೋ ಬೆಳೆಯುವುದು ಸೂಕ್ತವಲ್ಲ. ಜಿಲ್ಲಾ ಮಟ್ಟದಲ್ಲಿ ಬೆಳೆಗಳನ್ನು ನೀರಿನ ಲಭ್ಯತೆ, ಮಳೆಗೆ ಅನುಗುಣವಾಗಿ ಆಯ್ಕೆಮಾಡಿಕೊಳ್ಳಬಹುದು. ಇದಕ್ಕೆ ವೈಜ್ಞಾನಿಕವಾಗಿ ವಿಜ್ಞಾನಿಗಳು ಸಂಶೋಧನೆ ನಡೆಸಿ ಅದರ ಫಲವನ್ನು ರೈತರಲ್ಲಿ ಹಂಚಿಕೊಳ್ಳಬೇಕು.

ರೈತರಿಗೆ ಕೆಲವು ಬೆಳೆಗಳಿಂದ ಹೆಚ್ಚು ಖರ್ಚು ಬಂದು ಲಾಭಾಂಶ ಇಲ್ಲದಿರಬಹುದು. ಬೆಲೆ ಆಯೋಗವು ರೈತರ ಬೆಳೆಗಳಿಗೆ ಬೆಂಬಲ ಬೆಲೆ ಒದಗಿಸಿಕೊಡುತ್ತದೆ. ಜನರಿಗೆ ಆಹಾರ ಸುರಕ್ಷತೆ ಒದಗಿಸುವುದರ ಜೊತೆಗೆ ಸರ್ಕಾರ ರೈತರ ಏಳಿಗೆಗೂ ಶ್ರಮಿಸುತ್ತದೆ. ಸಂಶೋಧನೆಗಳ ಅಧ್ಯಯನಗಳ ಬಗ್ಗೆ ಪಾಲುದಾರರ ಅಭಿಪ್ರಾಯವನ್ನು ಪ್ರಶ್ನಾವಳಿಗಳ ಮೂಲಕ ಸಂಗ್ರಹಿಸಿ ಮುಂಬರುವ ದಿನಗಳಲ್ಲಿ ರೈತರಿಗೆ ಉಪಯುಕ್ತ ಮಾಹಿತಿ ನೀಡಲು ಕೃಷಿ ಬೆಲೆ ಆಯೋಗ ಸಜ್ಜುಗೊಂಡಿದೆ ಎಂದು ಅವರು ತಿಳಿಸಿದರು.

ಕಾರ್ಯಕ್ರಮದಲ್ಲಿ ಮಾತನಾಡಿದ ನಾಗಪುರದ ಎನ್.ಬಿ.ಎಸ್.ಎಸ್. ನ ಪಿ.ಎಂ.ಇ.ಸಿ. ಎಲ್ ನ ಡಾ. ಎಸ್. ಚಟರ್ಜಿ ಮಾತನಾಡಿ ರೈತರಿಗೆ ಪ್ರದೇಶಕ್ಕಾನುಗುಣವಾಗಿ ಬೆಳೆಗಳ ಪ್ರಾಧ್ಯಾನ್ಯತೆಯನ್ನು ಮನದಟ್ಟು ಮಾಡಿಕೊಡಬೇಕು. ಸಂಶೋಧನೆಗಳು ರೈತರಿಗೆ ತಲುಪಿ ಯಶ್ವಸಿಯಾಗಬೇಕೆಂದರು.

ಕಾರ್ಯಕ್ರಮದಲ್ಲಿ ಎನ್.ಬಿ.ಎಸ್.ಎಸ್. ನ ಮುಖ್ಯಸ್ಥರಾದ ಡಾ. ರಾಜೇಂದ್ರ ಹೆಗ್ಡೆ, ಹಿರಿಯ ವಿಜ್ಞಾನಿಗಳಾದ ಡಾ. ಎಸ್.ಸಿ. ರಮೇಶ್‌ಕುಮಾರ್ ಸೇರಿದಂತೆ ಅನೇಕ ವಿಜ್ಞಾನಿಗಳು, ರೈತರು, ಅಧಿಕಾರಿಗಳು ಉಪಸ್ಥಿತರಿದ್ದರು.

ಜಿಡಿ::ಜಿಪಿಆರ್

# ಭಯೋತ್ಪಾದನಾ ವಿರೋಧಿ ಪ್ರತಿಜ್ಞಾವಿಧಿ ಭೋಧನೆ

**ಬೆಂಗಳೂರು, ಮೇ 20, (ಕರ್ನಾಟಕ ವಾರ್ತೆ)**

ಭಯೋತ್ಪಾದನಾ ವಿರೋಧಿ ದಿನದ ಅಂಗವಾಗಿ ಇಂದು ವಿಧಾನ ಸೌಧ ಸಮ್ಮೇಳನಾ ಸಭಾಂಗಣದಲ್ಲಿ ನಡೆದ ಪ್ರಮಾಣವಚನ ಕಾರ್ಯಕ್ರಮದಲ್ಲಿ ಬೆಂಗಳೂರು ನಗರ ಜಿಲ್ಲಾ ಉಸ್ತುವಾರಿ ಸಚಿವ ಕೆ.ಜೆ. ಜಾರ್ಜ್ ಅವರು ಭಯೋತ್ಪಾದನಾ ವಿರೋಧಿ ಪ್ರತಿಜ್ಞಾವಿಧಿ ಭೋಧಿಸಿದರು.

ಪ್ರತಿವರ್ಷ ಮೇ 21 ಅನ್ನು "ಭಯೋತ್ಪಾದನಾ ವಿರೋಧಿ ದಿನ" ಎಂದು ಆಚರಿಸಲಾಗುತ್ತಿದ್ದು, ಪ್ರಸಕ್ತ ವರ್ಷ ಭಾನುವಾರ ಮೇ 21 ಬಂದಿರುವುದರಿಂದ "ಭಯೋತ್ಪಾದನಾ ವಿರೋಧಿ ದಿನ" ವನ್ನು ಇಂದು ಆಚರಿಸಲಾಯಿತು.

ಅಹಿಂಸೆ ಹಾಗೂ ಸಹನೆಗೆ ಹೆಸರಾದ ನಮ್ಮ ರಾಷ್ಟ್ರ ಪರಂಪರೆಯಲ್ಲಿ ವಿಶ್ವಾಸವುಳ್ಳ ಭಾರತದ ಪ್ರಜೆಗಳಾದ ನಾವು ಎಲ್ಲಾ ಬಗೆಯ ಭಯೋತ್ಪಾದನೆ ಮತ್ತು ಹಿಂಸೆಯನ್ನು ನಮ್ಮೆಲ್ಲಾ ಶಕ್ತಿಯಿಂದ ಎದುರಿಸುತ್ತೇವೆ ಎಂದು ಪ್ರತಿಜ್ಞಾವಿಧಿ ಭೋದಿಸಿದರು.

ಇದೇ ಸಂದರ್ಭದಲ್ಲಿ ಒಳಾಡಳಿತ ಇಲಾಖೆಯ ಸರ್ಕಾರದ ಅಪರ ಕಾರ್ಯದರ್ಶಿಗಳಾದ ಸುಭಾಷ್ ಚಂದ್ರ ಅಪರ ಮುಖ್ಯ ಕಾರ್ಯದರ್ಶಿ ಡಾ: ಮಂಜುಳಾ, ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆಯ ಪ್ರಧಾನ ಕಾರ್ಯದರ್ಶಿ ಡಾ: ರಮಣರೆಡ್ಡಿ ಹಾಗೂ ಸಚಿವಾಲಯದ ಹಿರಿಯ ಅಧಿಕಾರಿಗಳು ಮತ್ತು ಸಿಬ್ಬಂದಿಗಳು ಉಪಸ್ಥಿತರಿದ್ದರು.

# ಮಾವು ಮೇಳ

**ಬೆಂಗಳೂರು, ಮೇ 20, (ಕರ್ನಾಟಕ ವಾರ್ತೆ)**

ಕರ್ನಾಟಕ ರಾಜ್ಯ ಮಾವು ಅಭಿವೃದ್ಧಿ ಮತ್ತು ಮಾರುಕಟ್ಟೆ ನಿಗಮ (ನಿ.,) ಬೆಂಗಳೂರು ವತಿಯಿಂದ ಕರ್ನಾಟಕ ರಾಜ್ಯ ಮಾವು ಬೆಳೆಗಾರರಿಗೆ ಮಾವು ಮಾರುಕಟ್ಟೆ ಸೌಲಭ್ಯ ಕಲ್ಪಿಸುವ ದೃಷ್ಟಿಯಿಂದ ರಾಜ್ಯದ ವಿವಿದ ಜಿಲ್ಲೆಗಳಲ್ಲಿ ಹಾಗೂ ಬೆಂಗಳೂರು ನಗರದ ವಿವಿದ ಸ್ಥಳಗಳಲ್ಲಿ ಮಾವು ಮಾರಾಟ ಮೇಳವನ್ನು ಆಯೋಜಿಸಲಾಗುತ್ತಿದೆ.

ಬೆಂಗಳೂರು ನಗರದ ಎಲ್ಲಾ ಭಾಗಗಳ ಗ್ರಾಹಕರಿಗೆ ಕಾರ್ಬೈಡ್ ಮುಕ್ತ ನೈಸರ್ಗಿಕವಾಗಿ ಮಾಗಿಸಿದ ಮಾವಿನ ಹಣ್ಣುಗಳನ್ನು ನೇರವಾಗಿ ಮಾವು ಬೆಳೆಗಾರರಿಂದ ಗ್ರಾಹಕರಿಗೆ ಒದಗಿಸಲು ಬಯ್ಯಪ್ಪನಹಳ್ಳಿ ಮೆಟ್ರೋ ನಿಲ್ದಾಣ ಬೆಂಗಳೂರು ಇಲ್ಲಿ ಮಾವು ಮೇಳವನ್ನು **ದಿನಾಂಕ: 22.05.2017 ರಿಂದ 27.05.2017 ರ** ವರೆಗೆ ಆಯೋಜಿಸಲಾಗುತ್ತಿದೆ.

ಈ ಮಾವು ಮೇಳವನ್ನು **ದಿನಾಂಕ: 22.05.2017 ರಂದು ಸೋಮವಾರ ಸಂಜೆ 4.30 ಗಂಟೆಗೆ** ಶ್ರೀಮತಿ. ಪದ್ಮಾವತಿ, ಪೂಜ್ಯ ಮಹಾಪೌರರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ರವರು ಉದ್ಘಾಟಿಸಲಿದ್ದಾರೆ ಹಾಗೂ  ಗೋಪಾಲಕೃಷ್ಣ, ಮಾನ್ಯ ಅಧ್ಯಕ್ಷರು ಕರ್ನಾಟಕ ರಾಜ್ಯ ಮಾವು ಅಭಿವೃದ್ಧಿ ಮತ್ತು ಮಾರುಕಟ್ಟೆ ನಿಗಮ (ನಿ.,) ರವರು ಈ ಕಾರ್ಯಕ್ರಮದಲ್ಲಿ ಉಪಸ್ಥಿತರಿರುವರೆಂದು ಕರ್ನಾಟಕ ಮಾವು ಅಭಿವೃದ್ಧಿ ಮತ್ತು ಮಾರುಕಟ್ಟೆ ನಿಗಮದ  ಪ್ರಕಟಣೆ ತಿಳಿಸಿದೆ.